ಶ್ರೀ ಬಾಬುರಾವ್ ಚಿಂಚನಸೂರು (ಮುಜರಾಯಿ ಸಚಿವರು) :—

1. 1999-2000, 2000-2001 ಮತ್ತು 2001-2002ರಲ್ಲಿ ದೇವಾಲಯಗಳ ದುರಸ್ಥಿ/ಜೀರ್ಣೋದ್ಧಾರ ಮತ್ತು ನಿರ್ಮಾಣಕ್ಕೆ ಬಂದ ಪ್ರಸ್ತಾವನೆಗಳ ಸಂಖ್ಯೆ ಒಟ್ಟು 745.

1999-2000		-	289
2000-2001		-	398
2001-2002		-	58
ಜೂನ್ 2000ದ ಅಂತ್ಯವರೆಗೆ	ಒಟ್ಟು	-	745

ವರ್ಷವಾರು ಹಣ ಬಿಡುಗಡೆಯಾದ ವಿವರ.

ವರ್ಷ	ಸಂಸ್ಥೆ ಸಂಖ್ಯೆ	ದುರಸ್ಥಿ ಜೀರ್ಣೋದ್ಧಾರ	ಸಂಸ್ಥೆ ಸಂಖ್ಯೆ	ನಿರ್ಮಾಣ ಸಂಖ್ಯೆ	ಒಟ್ಟು	ಒಟ್ಟು ಮೊತ್ತ (ರೂ.ಲಕ್ಷಗಳಲ್ಲಿ)
1999-2000	241	126.00	198	105.00	439	231.00
2000-2001	237	126.00	156	105.00	393	231.00
2001-2002	ಆರ್ಥಿಕ ವರ್ಷದ ಅಂತ್ಯಕ್ಕೆ ಬಿಡುಗಡೆ ಮಾಡಲಾಗುವುದು.					

ಕಾರ್ಕಳ ನಗರಕ್ಕೆ ನೀರು ಸರಬರಾಜು ಯೋಜನೆ.

2336(2768) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) :— ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಕಾರ್ಕಳ ನಗರ ನೀರು ಸರಬರಾಜು ಯೋಜನೆಯು ಪೂರ್ಣವಾಗಿದೆಯೇ, ಇಲ್ಲದಿದ್ದಲ್ಲಿ ಅಲ್ಲಿರುವ ಕೊರತೆಗಳೇನು?

2. ಅದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕಾರ್ಯಕ್ರಮವೇನು?

3. ನೂತನವಾಗಿ ಬಂಗ್ಲೆಗುಡ್ಡ ಪ್ರದೇಶಕ್ಕಾಗಿ ನಿರ್ಮಿಸಿದ ಓವರ್‌ಹೆಡ್ ಟ್ಯಾಂಕ್‌ಗೆ ನೀರು ಸರಬರಾಜು ಮಾಡುವ ಪೈಪ್‌ಲೈನ್ ಅಳವಡಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೇ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಯವರು) :—

1. ಕಾರ್ಕಳ ನಗರ ನೀರು ಸರಬರಾಜು ಯೋಜನೆಯನ್ನು ಜನವರಿ 1997ರಲ್ಲಿ ಚಾಲನೆಗೊಳಿಸಲಾಗಿದ್ದು, ಏಪ್ರಿಲ್ 1997ರಲ್ಲಿ ಪೂರ್ಣಗೊಳಿಸಿ ಕಾರ್ಕಳ ಪುರಸಭೆಗೆ ನಿರ್ವಹಣೆಗಾಗಿ ಹಸ್ತಾಂತರಿಸಲಾಗಿದೆ.

2. ಉದ್ಭವಿಸುವುದಿಲ್ಲ.

3. ಕಾರ್ಕಳ ಪಟ್ಟಣದ ಜಲ ಶುದ್ಧೀಕರಣ ಆವರಣದಲ್ಲಿರುವ ಮೇಲಚ್ಚಿದ ಜಲಸಂಗ್ರಹಾಗಾರದಿಂದ ನೂತನವಾಗಿ ಕಟ್ಟಲಾಗಿರುವ 10.00 ಲಕ್ಷ ಲೀಟರ್ ಸಾಮರ್ಥ್ಯದ ಓವರ್‌ಹೆಡ್ ಟ್ಯಾಂಕಿಗೆ ನೀರನ್ನು ಒದಗಿಸುವ ಸಲುವಾಗಿ 200 ಮಿ.ಮಿ. ವ್ಯಾಸದ ಎಂ.ಎಸ್. ಪೈಪ್ ಲೈನ್ (4020ಮೀಟರ್) ಅಳವಡಿಸಲು 2000-2001ರ ದರಪಟ್ಟಿಯಂತೆ ರೂ. 90.00 ಲಕ್ಷಗಳ ಅಂದಾಜನ್ನು ದಿನಾಂಕ 28.6.2001ರಲ್ಲಿ ಸರ್ಕಾರಕ್ಕೆ ಅನುಮೋದನೆಗಾಗಿ ಸಲ್ಲಿಸಲಾಗಿದ್ದು ಸರ್ಕಾರದ ಪರಿಶೀಲನೆಯಲ್ಲಿದೆ.

ಕರಾವಳಿ ಜಿಲ್ಲೆಗೆ ಅನುಕೂಲವಾಗುವಂತೆ ಸಣ್ಣ ನೀರಾವರಿ ಕಾರ್ಯಕ್ರಮಗಳು.

2337(2769) ಶ್ರೀ ಗೋಪಾಲ ಬಂಡಾರಿ (ಕಾರ್ಕಳ) :— ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಕರಾವಳಿ ಜಿಲ್ಲೆಗೆ ಅನುಕೂಲವಾಗುವಂತೆ ಕೈಗೊಂಡ ನೀರಾವರಿ ಕಾಮಗಾರಿಗಳಾವುವು;

ಆ) ಪಶ್ಚಿಮವಾಹಿನಿ ಎನ್ನುವ ಕಾರ್ಯಕ್ರಮವನ್ನು ರೂಪಿಸಿದ್ದು, ಇದರಲ್ಲಿರುವ ಕಾರ್ಯಕ್ರಮಗಳೇನು?

ಇ) ಪಶ್ಚಿಮವಾಹಿನಿ ಕಾರ್ಯಕ್ರಮವನ್ನು ಅನುಷ್ಠಾನ ಮಾಡಲು ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :—

ಅ) ಕರಾವಳಿ ಜಿಲ್ಲೆಗೆ ಅನುಕೂಲವಾಗುವಂತೆ ಸಣ್ಣ ನೀರಾವರಿ ಇಲಾಖೆಯಿಂದ, ಕಿಂಡಿ ಅಣೆಕಟ್ಟುಗಳ, ಉಪ್ಪು ನೀರು ತಡೆ ಅಣೆಕಟ್ಟುಗಳ, ನಿರ್ಮಾಣ ಮತ್ತು ನಿರ್ವಹಣೆ ಹಾಗೂ ಕೆರೆಗಳ ಅಭಿವೃದ್ಧಿ

ಆ), ಇ) ಪಶ್ಚಿಮವಾಹಿನಿ ಯೋಜನೆಯಲ್ಲಿ, ಕರಾವಳಿ ಜಿಲ್ಲೆಗಳಲ್ಲಿ ಹರಿಯುವ ನದಿಗಳ ಹಾಗೂ ಹೊಳೆಗಳ ಅಡ್ಡಲಾಗಿ ಕಿಂಡಿ ಅಣೆಕಟ್ಟುಗಳ ನಿರ್ಮಾಣ ಮತ್ತು ಪ್ರತಿ ನದಿಗಳ ಸಮುದ್ರ ಸೇರುವ ಕೊನೆಯ ಹಂತದಲ್ಲಿ ಉಪ್ಪುನೀರು ತಡೆ ಅಣೆಕಟ್ಟುಗಳನ್ನು ನಿರ್ಮಿಸುವ ಕಾಮಗಾರಿಗಳನ್ನು ಪರಿಶೀಲಿಸಲಾಗುತ್ತಿದೆ.